ಈ ವರ್ಗಕ್ಕೆ ನಿಜವಾಗಿಯೂ ನ್ಯಾಯ ದೊರಕಿಸಿಕೊಟ್ಟರೆ ಮಹಿಳೆಯರು ಮತ್ತು ಪುರುಷರು, ವಿದ್ಯಾವಂತರೂ ಕೂಡ ಅಲ್ಲಿ ಕೆಲಸ ಮಾಡುತ್ತಾರೆ. ನಮ್ಮ ನೇತೃತ್ವದಲ್ಲಿ ಶೋಷಣೆ ರಹಿತವಾಗಿ ಆಗಬೇಕೆಂದು ಕೇಳುತ್ತಾ, ಒಂದು ದಿವಸದಲ್ಲಿ ಎಷ್ಟು ಗಂಟೆ ಕೆಲಸ ಮಾಡಬೇಕೆಂಬುದರ ಬಗ್ಗೆ ಏನಾದರು ನಿಯಮ ಇದೆಯೇ ಮತ್ತೆ ಕಾರ್ಮಿಕರ ಪ್ರಯಾಣಿಕ್ಕೂ ಕೂಡ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ ಪೀಣ್ಯದಲ್ಲಿ ಸುಮಾರು 5 ಲಕ್ಷ ಜನ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಗಾರ್ಮೆಂಟ್ಸ್‌ಗೆ ಹೋಗುವವರ ಸಂಖ್ಯೆ ಜಾಸ್ತಿ ಇದೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಿಳಿಸಿರುವಂತೆ ಇವತ್ತಿನ ದಿವಸ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕಂಥ ಅವದಿ 8 ಗಂಟೆಯಾಗಿರುತ್ತದೆ. ಅವರು 8 ಗಂಟೆ ಅವದಿಯವರೆಗೆ ಕೆಲಸ ಮಾಡಬೇಕು. ಒಂದು ವೇಳೆ ಹೆಚ್ಚಿಗೆ ಕೆಲಸ ಮಾಡಿದರೆ over time ಮಾಡಿರತಕ್ಕಂಥ ಹಣವನ್ನು ಅವರು ಪಡೆಯುತ್ತಾರೆ. ಮಾನ್ಯ ಸದಸ್ಯರು ತಿಳಿಸಿರುವಂತೆ 10, 12, ಗಂಟೆಯವರೆಗೆ ದುಡಿಸಿಕೊಳ್ಳುತ್ತಾರೆಂದರೆ, ಆರೀತಿಯಾಗಿ ದುಡಿಸಿಕೊಂಡವರಿಗೆ over time wages ಕೊಡಬೇಕಾಗುತ್ತದೆ. ಮತ್ತೆ ಕಾರ್ಖಾನೆಗಳಲ್ಲಿರುವ, ಕಲ್ಯಾಣ ಅಧಿಕಾರಿಗಳು ಕಾರ್ಮಿಕರನ್ನು ಕರೆದುಕೊಂಡು ಬರುವುದಕ್ಕೆ ಸಾರಿಗೆ ವ್ಯವಸ್ಥೆಯನ್ನು ಮಾಡಿಕೊಡಿ ಎಂದು ಕೇಳಿದ್ದಾರೆ. ಅದರ ಬಗ್ಗೆ ಗಮನ ಕೊಟ್ಟು ಸಾರಿಗೆ ವ್ಯವಸ್ಥೆಯನ್ನೂ ಸಹ ಮಾಡಿ ಕೊಡಲಾಗುತ್ತದೆ.

ಅಧ್ಯಕ್ಷರು:– ಈಗ ಪ್ರಶ್ನೋತ್ತರ ಅವದಿ ಮುಗಿದಿದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

<u>ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು</u> ದಿನಾಂಕ: 31.07.2008 ತಂದು 09ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 42 ಪ್ರಶ್ನೆಗಳ ಪೈಕಿ 42 ಹಾಗೂ ದಿನಾಂಕ: 30.07.2008 ರಂದು 08ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 70 ಪ್ರಶ್ನೆಗಳ ಪೈಕಿ 69 ಹಾಗೂ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಹಾಗೂ ದಿನಾಂಕ: 29.07.2008ರ ಪಟ್ಟಿ 07ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 75 ಪ್ರಶ್ನೆಗಳ ಪೈಕಿ 71 ಮತ್ತು ಸದನದಲ್ಲಿ ಉತ್ತರಿಸುವ 18 ಪ್ರಶ್ನೆಗಳ ಪೈಕಿ 18 ಹಾಗೂ ದಿನಾಂಕ: 28.07.2008ರಂದು 06ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 84 ಪ್ರಶ್ನೆಗಳ ಪೈಕಿ 77 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.